ಓ.ಎಸ್. ನಂ. **314/2019**

ಪಿ.ಡಬ್ಲೂ.**1**

ದಿನಾಂಕಃ 08.02.2023 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಶ್ರೀ. ವಿ.ಕೆ. ವಕೀಲರಿಂದಃ

ನಾನು ಈ ದಾವೆಯ ವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸ.ನಂ.1/2 ಬಿ ಗಣಕೀಕೃತ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಸ.ನಂ.130/3 ಎ ಗಣಕೀಕೃತ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-3 ಎಂದು, ಹೊನ್ನೇಗೌಡ ನ ಮರಣ ಪ್ರಮಾಣ ಪತ್ರವನ್ನು ನಿಪಿ-4 ಎಂದು, ವೆಂಕಟೇಗೌಡನ ಮರಣ ಪ್ರಮಾಣ ಪತ್ರವನ್ನು ನಿಪಿ-5 ಎಂದು, ದೊಡ್ಡತಾಯಮ್ಮ ನ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲ ಪ್ರತಿಯನ್ನು ನಿಪಿ-6 ಎಂದು, ಗೋವಿಂದೇಗೌಡನ ಮರಣ ಪ್ರಮಾಣ ಪತ್ರದ ದೃಢೀಕೃತ ನಕಲ ಪ್ರತಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,

ನ್ಯಾಯಾಧೀಶರು, ಹುಣಸೂರು.